ಜನರನ್ನು ಕರ್ನಾಟಕಕ್ಕೆ ಕರೆದುಕೊಂಡು ಬಂದು ಅವರ ಮನೆಗೆ ಸೇರಿಸಿ ನಂತರ ನಾವು ಯಾವ ರೀತಿ ಆದರೂ ಫೈಟ್ ಮಾಡೋಣ.

ಅಧ್ಯಕ್ಷರು: ಈಗ ಒಂದು ಪ್ರಕಟಣೆ.

ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 103ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 19ನೇ ಆಗಸ್ಟ್ 1997 ರಂದು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತು. ಸದರಿ ವಿಧೇಯಕಕ್ಕೆ ವಿಧಾನ ಸಭೆಯ ಸಹಮತಿಯನ್ನು ನೀಡಬೇಕೆಂದು ಈ ಮೂಲಕ ಕೋರುತ್ತೇನೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು
ಅಧ್ಯಕ್ಷ ಪೀಠವನ್ನಂಕರಿಸಿದರು).

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಅನೇಕ ಬೇಡಿಕೆಗಳ ಮೇಲೆ ಮಂತ್ರಿಯವರು ತಮ್ಮ ಇಲಾಖೆಯ ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ. ಇದರಲ್ಲಿ ಕೆಲವು ಬಹಳ ಪ್ರಾಮುಖವಾಗಿರತಕ್ಕ ಕೆಲವು ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ತಾವು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಮೊದಲನೇಯದಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇವತ್ತು ಎಲ್ಲಾ ಇಲಾಖೆಗಳಲ್ಲೂ ವಿಶೇಷವಾಗಿ ಜನಾಡಳಿತ ಮತ್ತು ಭೂಕಂದಾಯ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ಹೀಗೆ ಕೆಲವು ಬೇಡಿಕೆಗಳ ಮೇಲೆ ನನ್ನ ಮಾತುಗಳನ್ನು ಸೀಮಿತಗೊಳಿಸಿ ಮಾತನಾಡುತ್ತೇನೆ. ಇವತ್ತು ನಾವು ಸ್ವಾತಂತ್ರ್ಯೋತ್ಸವ ಸುವರ್ಣಾ ಮಹೋತ್ಸವನ್ನು ಈಗಾಗಲೇ ಆಚರಿಸಿದ್ದೇವೆ. ಈ ಒಂದು ಸಂದರ್ಭದಲ್ಲಿ ನಾವೆಲ್ಲರೂ ಕೂಡ ಬಹುಶಃ ಈ 50 ವರ್ಷಗಳ ಆಡಳಿತದ ಬಗ್ಗೆ ಪರಾಮರ್ಶಿಸಬೇಕಾದಂತಹ ಕಾಲಾವಕಾಶ ನಮಗೆ ಬಂದಿದೆ. ದುರ್ದೈವ ಮತ್ತು ಇವತ್ತು 50 ವರ್ಷಗಳನ್ನು ದಾಟಿದರೂ ಕೂಡ ಬೇರೆ ಬೇರೆ ಇಲಾಖೆಗಳಲ್ಲಿ ಅನೇಕ ನ್ಯೂನತೆಗಳನ್ನು ನಾವು ಇವತ್ತು ಕಾಣುತ್ತಿದ್ದೇವೆ. ಅದನ್ನು ಸರಿಪಡಿಸಲಿಕ್ಕೆ ಇವತ್ತು ಸಾಧ್ಯವಾಗುತ್ತಿಲ್ಲ, ಆದರೆ ಒಂದು ಮಾತು ಜಿಲ್ಲಾಡಳಿತದ ಮಾತು ಆಡುವಾಗ ಬಹುಶಃ ನಾನೂ ಕೂಡ ಹೊಸ ಜಿಲ್ಲಾ

ಪುನರ್ ವಿಂಗಡನೆಯ ಬಗ್ಗೆ ಸ್ವಾಗತಾರ್ಹವಾಗಿರತಕ್ಕ ವಿಚಾರಗಳನ್ನು ಮೊನ್ನೆ ಆಗಸ್ಟ್ 15ರಂದು ಬಾಗಲಕೋಟೆ ಜಿಲ್ಲೆ ಏನು ನಾಮಕರಣ ಮಾಡಿದರು, ಸ್ವಾತಂತ್ರ್ಯೋತ್ಸವದ ದಿವಸ ಮೂರು ಜಿಲ್ಲೆಗಳನ್ನು ಘೋಷಣೆ ಮಾಡಿದರು. ಅಂದೇ ನಾನು ವೇದಿಕೆಯ ಮೇಲೆ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಅಭಿನಂದಿಸಿದ್ದೇನೆ. ಈ ಹೊಸ ಜಿಲ್ಲಾ ಪುನರ್ ವಿಂಗಡನೆ ಆಗತಕ್ಕ ಕೆಲಸ ಬಹಳ ಸ್ವಾಗತಾರ್ಹವಾದ ವಿಚಾರ. ಅದರಲ್ಲೂ ಕಂದಾಯ ಇಲಾಖೆಯಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕ ಒಂದು ಕೆಲಸ ಎಂದು ಹೇಳಬಹುದು. ನನ್ನ ದೃಷ್ಟಿಯಲ್ಲಿ ಈ ಸ್ವಾತಂತ್ರ್ಯೋತ್ಸವದ ನಿಮಿತ್ತ ಅನೇಕ ಬೇಡಿಕೆಗಳ ಮೇಲೆ ಸದನದೊಳಗೆ ಬಹಳ ಕಡೆ ಚರ್ಚೆ ಮಾಡಿದ್ದೇವೆ. ಅದು ಪರವಾಗಿ ಆಗಬಹುದು, ಅಥವಾ ವಿರೋಧವಾಗಿ ಆಗಬಹುದು. ಆದರೆ ಇವತ್ತು ಬಹಳ ಮುಖ್ಯವಾಗಿ ಅದು ಕಂದಾಯ ಇಲಾಖೆಯ ಮೇಲೆ ಆಗಬಹುದು ಅಥವಾ ಬೇರೆ ಇಲಾಖೆ ಮೇಲೆ ಆಗಬಹುದು. ಸದನದ ಹೊರಗಡೆ ವಿಶ್ವವಿದ್ಯಾನಿಲಯಗಳಲ್ಲಾಗಲೀ, ಇನ್ನಿತರ ಸಾಹಿತ್ಯ ಕ್ಷೇತ್ರಗಳಲ್ಲಾಗಲೀ, ಕಾಲೇಜ್ ಮಟ್ಟದಲ್ಲಾಗಲೀ, ಮತ್ತು ನಿವೃತ್ತಿ ಹೊಂದಿರತಕ್ಕ ಅನೇಕ ಇಲಾಖಾ ಮುಖ್ಯಸ್ಥರ ಮೂಲಕವಾಗಲೀ, ಸಮಗ್ರವಾಗಿ ಚರ್ಚೆ ಆಗಿ ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದೇ ಆದರೆ ಬಹಳ ಉಪಯೋಗವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

4.50 ಪಿ.ಎಂ

ಈ ಒಂದು ಸ್ವಾತಂತ್ರ್ಯೋತ್ಸವದ ನಿಮಿತ್ತ ಈ ಒಂದು ಕಾರ್ಯವನ್ನು ಸರ್ಕಾರದವರೇ ಮುಂದಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರೆ, ಬಹುಶಃ ಆಗಸ್ಟ್ 15ರ ಒಳಗಾಗಿ 15 ದಿವಸಗಳ ಕಾಲ ಚರ್ಚೆ ಮಾಡಿ ಸೂಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದರೆ ಅದು ಬಹುಶಃ ಕಂದಾಯ ಇಲಾಖೆಗೆ ಹೆಚ್ಚು ಸಹಾಯ ಆಗುತ್ತಿತ್ತು ಮತ್ತು ಇನ್ನಿತರ ಇಲಾಖೆಗಳಿಗೂ ಕೂಡ ಸಹಾಯ ಆಗುತ್ತಿತ್ತು. ಈ 50 ವರ್ಷಗಳ ಇತಿಹಾಸದಲ್ಲಿ ಅಮೂಲಾಗ್ರವಾಗಿ ಬದಲಾವಣೆಗಳ ಮೂಲಕ ನ್ಯೂನತೆಗಳನ್ನು ಸರಿಪಡಿಸಲು ಸಾಧ್ಯವಾಗುತ್ತಿತ್ತೇನೋ ಎಂದು ನನ್ನ ಭಾವನೆ. ಈ ಹೊಸ ಜಿಲ್ಲೆಗಳ ವಿಂಗಡನೆ ಆಗತಕ್ಕಂಥ ಕೆಲಸ, ಬಹುಶಃ ಇದಕ್ಕೆ ಉತ್ತೇಜನ ನೀಡಿರತಕ್ಕಂಥವರು ನಾವು ಈ ಪ್ಲಾನಿಂಗ್ ಕಮೀಷನ್ ಎಂದು ಏನು ಹೇಳುತ್ತೇವೆ ಅವರಾಗಲೀ, ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮೀಷನ್‌ನವರಾಗಲೀ ರೀಸರ್ಚ್ ಇನ್ಸ್‌ಟಿಟ್ಯೂಷನ್‌ನವರಾಗಲೀ ಈ ಅಡಳಿತ ಒಳ್ಳೆಯ ರೀತಿಯಿಂದ ಆಗಬೇಕು ಎಂದು ಕೆಲವು ಸಲಹೆಗಳನ್ನು ಕೂಡ ಅವರು ಕೊಟ್ಟಿದ್ದರು. ಅದಾದಮೇಲೆ 1960ರಲ್ಲಿ ವಿ.ಎಲ್. ಎಸ್. ಪ್ರಕಾಶ್‌ರಾವ್ ಮತ್ತು ಎಲ್.ಎಸ್. ಭಟ್ ಎನ್ನುವವರು ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್‌ಟಿಟ್ಯೂಷನ್ ಆಫ್ ಕಲ್ಕತ್ತಾ ಇವರೂ ಕೂಡ ಕೇಂದ್ರ ಸರ್ಕಾರಕ್ಕೆ ಆಗ ಒಂದು ವರದಿಯನ್ನು ಸಲ್ಲಿಸಿದ್ದರು. ಬಹುಶಃ ಆಗ ಚೈನಾ ವಾರ್ ಬಂತು ಎಂದು ಕಾಣಿಸುತ್ತದೆ. ಆಗ ಆ ವರದಿಗಳು ಜಾರಿಗೆ ಬರಲು ಆಗಲಿಲ್ಲ. ಪ್ಲಾನಿಂಗ್ ಕಮೀಷನ್‌ನವರಾಗಲೀ, ಅಡ್ಮಿನಿಸ್ಟ್ರೇಟಿವ್ ರಿಫಾರಮ್ಸ್ ಕಮೀಷನ್‌ನವರಾಗಲೀ ಯಾವುದಕ್ಕೆ ಹೆಚ್ಚು ಒತ್ತು ಕೊಟ್ಟರು ಎಂದರೆ ಯಾವುದಾದರೂ ಸರ್ಕಾರದ ಅಧಿಕಾರಿಗಳು ಕೆಲಸ ಮಾಡಬೇಕಾದರೆ ಮತ್ತು ಸರ್ಕಾರದ ಸವಲತ್ತುಗಳು ಪ್ರತಿಯೊಬ್ಬ ಪ್ರಜೆಗೂ ಸರಿಯಾಗಿ ಅವನ ಪಾಲು ಮುಟ್ಟಬೇಡು ಎಂದರೆ,

ಆಡಳಿತದ ಪಾಲು ಮುಟ್ಟಬೇಕು ಎಂದರೆ ಬಹಳ ಸಣ್ಣಪುಟ್ಟ ಜಿಲ್ಲೆಗಳು ಆದಾತ ಅದರ ಸದುಪಯೋಗವಾಗುತ್ತದೆ ಎನ್ನುವಂತ ಮಾತು ಆಗಿನ ಕಾಲದಿಂದಲೂ ಇತ್ತು. ಬಹುಶಃ ಆ ವಿಚಾರದ ಹಿನ್ನಲೆಯಲ್ಲಿ ಇಂದು ವಾಸುದೇವ್ ಸಮಿತಿ ರಚನೆ ಆಗಿರತಕ್ಕಂಥಾದ್ದಾಗಲೀ, ಹುಂಡೇಕಾರ್ ಸಮಿತಿ 1987ರಲ್ಲಿ ವರದಿ ಸಲ್ಲಿಸಿರತಕ್ಕಂಥಾದ್ದಾಗಲೀ, ಶ್ರೀ ಗದ್ದಿಗೌಡರ ಸಮಿತಿ ವರದಿ ಕೊಟ್ಟಿರತಕ್ಕಂಥಾದ್ದಾಗಲೀ, ಈ ಎಲ್ಲಾ ವರದಿಗಳ ಆಧಾರದ ಮೇಲೆ ಇಂದು ಏಳು ಜಿಲ್ಲೆಗಳ ಪುನರ್‌ವಿಂಗಡನೆ ಮಾಡಿದ್ದೀರಿ. ಇನ್ನೂ ಎರಡನ್ನು ತಾವು ಮಾಡಬೇಕಾಗಿದೆ. ಗುಲ್ಬರ್ಗಾ ಮತ್ತು ವಿಶೇಷವಾಗಿ ಬೆಳಗಾಂ ಜಿಲ್ಲೆಯನ್ನು ತಾವು ಮಾಡುವಂಥ ಹಂತದಲ್ಲಿದ್ದೀರಿ. ಜಿಲ್ಲಾ ಪುನರ್ ವಿಂಗಡನೆಯಾಗತಕ್ಕಂಥ ಕೆಲಸ ಬಹು ದಿವಸಗಳಿಂದ ಆಗಬೇಕಾಗಿರತಕ್ಕಂಥಾದ್ದು. ಸದವಕಾಶದಿಂದ ಈ ಒಂದು ಕೀರ್ತಿಯನ್ನು ತಾವು ತೆಗೆದುಕೊಂಡಿದ್ದೀರಿ. ಈ ಜಿಲ್ಲೆಗಳ ಪುನರ್ ವಿಂಗಡನೆ ಮಾಡತಕ್ಕಂಥ ಸಂದರ್ಭದಲ್ಲಿ ನನಗೆ ಬಹಳ ದಿವಸಗಳಿಂದ ಒಂದು ಮಾತು ಕೇಳಿ ಬರುತ್ತಿತ್ತು. ಇವತ್ತೂ ಕೇಳಿಬರುತ್ತಿದೆ. ಉತ್ತರ ಕರ್ನಾಟಕಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿಲ್ಲ, ಅದು ಅನೇಕ ಸವಲತ್ತುಗಳಿಂದ ವಂಚಿತವಾಗಿದೆ ಎನ್ನುವಂಥ ಮಾತನ್ನು ನಾವೆಲ್ಲರೂ ಕೂಡ ಮಾತನಾಡುತ್ತೇವೆ. ಬಹುಶಃ ಈ ಜಿಲ್ಲೆಗಳು ಬಹಳ ದೊಡ್ಡದಾಗಿರುವುದರಿಂದ ಈ ಒಂದು ಸವಲತ್ತುಗಳು ಎಲ್ಲಾ ತಾಲ್ಲೂಕುಗಳಿಗೆ ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತೂ ಕೂಡ ಇವತ್ತು ನಮಗೆ ಮನವರಿಕೆಯಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ ವಿಜಾಪುರ ಜಿಲ್ಲೆಯಲ್ಲಿ 11 ತಾಲ್ಲೂಕುಗಳು, ಧಾರವಾಡ ಜಿಲ್ಲೆ 17 ತಾಲ್ಲೂಕುಗಳನ್ನು ಒಳಗೊಂಡಿರತಕ್ಕಂಥಾದ್ದು ಇದೆ. ಗುಲ್ಬರ್ಗಾದಲ್ಲಿ 11, ಬೆಳಗಾಂನಲ್ಲಿ 10 ತಾಲ್ಲೂಕುಗಳು ಹೀಗೆ 10-11 ತಾಲ್ಲೂಕುಗಳನ್ನು ಇಟ್ಟುಕೊಂಡು ಆಡಳಿತ ಮಾಡತಕ್ಕಂಥ ಜಿಲ್ಲಾಧಿಕಾರಿಗಳಾಗಲೀ, ಜಿಲ್ಲಾ ಮುಖ್ಯಸ್ಥರಿಗಾಗಲೀ, ಅಧಿಕಾರಿಗಳಿಗಾಗಲೀ, ಯಾರಿಗೇ ಆಗಲೀ, ಅವರಿಗೆ ಪ್ರವಾಸ ಮಾಡುವುದಕ್ಕಾಗಲೀ ಮತ್ತು ಪ್ರತಿಯೊಂದು ತಾಲ್ಲೂಕುಗಳಿಗೆ ಭೇಟಿ ಕೊಟ್ಟು ಅವರ ಸಮಸ್ಯೆಗಳನ್ನು ಬಿಡಿಸುವುದಕ್ಕಾಗಲೀ ಮತ್ತು ಆಗುಹೋಗುಗಳನ್ನು ನೋಡಲೂ ಕೂಡ ಸಾಧ್ಯವಾಗುತ್ತಿರಲಿಲ್ಲ. ಆ ದೃಷ್ಟಿಯಿಂದ ಸರ್ಕಾರ ಇವತ್ತು ಜಿಲ್ಲೆಗಳ ಪುನರ್‌ವಿಂಗಡನೆಯಂಥ ಏನೊಂದು ಒಳ್ಳೆಯ ಕೆಲಸ ಮಾಡಿದೆ, ಅದು ನಿಜವಾಗಲೂ ಬಹಳ ಶ್ಲಾಘನೀಯವಾಗಿರತಕ್ಕಂಥ ಕೆಲಸ ಎಂದು ನಾನಾದರೂ ಒಪ್ಪಿಕೊಂಡಿದ್ದೇನೆ. ಇವತ್ತು 20 ಜಿಲ್ಲೆಗಳು ಏನು ಆಗಿದ್ದವು, ಅವು ಇನ್ನು ಮುಂದೆ 27 ಆಗಿದ್ದು, ಇನ್ನೂ ಎರಡು ಜಿಲ್ಲೆಗಳನ್ನು ಮಾಡುವವರಿದ್ದೀರಿ. ಅದರಲ್ಲಿ 52 ಸಬ್ ಡಿವಿಷನಲ್ ಆಫೀಸ್‌ಗಳಿವೆ, 175 ತಾಲ್ಲೂಕು ಈ ಜಿಲ್ಲಾ ಆಡಳಿತದ ವ್ಯಾಪ್ತಿಯಲ್ಲಿ ಬರತಕ್ಕಂಥ ವಿಚಾರಗಳು. ಆ ದೃಷ್ಟಿಯಿಂದ ಇವತ್ತು ಜಿಲ್ಲಾ ಪುನರ್ ವಿಂಗಡನೆ ಆದ ನಂತರ ಬಹಳ ವ್ಯವಸ್ಥಿತವಾದ ರೀತಿಯಲ್ಲಿ ಅಷ್ಟೇ ಸವಲತ್ತುಗಳನ್ನು ತಾವು ಕೊಡಬೇಕಾಗುತ್ತದೆ. ನಾವು ಕೇವಲ ಜಿಲ್ಲೆಗಳನ್ನು ಘೋಷಣೆ ಮಾಡುವುದರಿಂದ ಅದರ ಅಭಿವೃದ್ಧಿಯಾಗುವುದಿಲ್ಲ. ಅದರ ಜೊತೆಗೆ ತಾಲ್ಲೂಕು ಪುನರ್ ವಿಂಗಡನೆಯಾಗಬೇಕು. ಮತ್ತು ಸರ್ಕಲ್‌ಗಳು ಆಗಬೇಕು ಮತ್ತು ಅಂಥ ಜಿಲ್ಲೆಗಳಿಗೆ ಬೇಕಾಗತಕ್ಕಂಥ ಅನೇಕ ಕಛೇರಿಗಳಿಗೆ ಕಟ್ಟಡಗಳು ಆಗಬೇಕು. ಇವಕ್ಕೆಲ್ಲಾ ಹಣ ಸಹಾಯ ಆಗಬೇಕು. ಆರ್ಥಿಕ ಮುಗ್ಗಟ್ಟಿನಿಂದ ಅನೇಕ ಜಿಲ್ಲೆಗಳು ಬಹಳ ವರ್ಷಗಳವರೆಗೆ ಒಂದು ಒಳ್ಳೆಯ ವ್ಯವಸ್ಥಿತವಾದಂಥ ಆಡಳಿತವನ್ನು ಕೊಡಬೇಕು ಎಂದರೆ ಅದಕ್ಕೆ ಹತ್ತಾರು ವರ್ಷಗಳೇ ಬೇಕಾಗಬಹುದು. ಆ ದೃಷ್ಟಿಯಿಂದ ಸರ್ಕಾರವಾಗಲೀ, ಕಂದಾಯ ಮಂತ್ರಿಗಳಾಗಲೀ,

ಮುಖ್ಯ ಮಂತ್ರಿಗಳಾಗಲೀ ಹೆಚ್ಚಿನ ಒಂದು ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಡಬೇಕಾಗುತ್ತದೆ ಎಂದಾಗ ಮಾತ್ರ ಈ ಜಿಲ್ಲೆಗಳನ್ನು ನಾಮಕರಣ ಮಾಡಿದ್ದೂ ಕೂಡ ಸಾರ್ಥಕ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಜಿಲ್ಲಾ ಪುನರ್ ವಿಂಗಡನೆಯಾದಮೇಲೆ, ವಿಶೇಷವಾಗಿ ಈ ಜಿಲ್ಲಾ ಆಡಳಿತದ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ನಮ್ಮ ಕಾಗೋಡು ತಿಮ್ಮಪ್ಪನವರು ನಿನ್ನೆ ಅನೇಕ ವಿಚಾರಗಳನ್ನು ಬಹಳ ಪ್ರಾಸ್ತಾವಿಕವಾಗಿ ಮಾತನಾಡಿದ್ದಾರೆ. ಬಹಳ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿದ್ದಾರೆ. ಇವತ್ತು ಕಂದಾಯ ಇಲಾಖೆ ಎಂದಾಗ ಅದನ್ನು ಮೂರು ಭಾಗಗಳನ್ನಾಗಿ ಮಾಡಬಹುದು. ಆಡಳಿತದ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಹಿಂದೆ ಮಹಾರಾಜರ ಕಾಲ ಒಂದಿತ್ತು. ಆ ಕಾಲದಲ್ಲಿಯೂ ಕೂಡ ರಾಜರೂ ತಮ್ಮ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಗಳಿಗೆ ಧಕ್ಕೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು. ಅವರ ಆಗುಹೋಗುಗಳನ್ನು ನೋಡುತ್ತಿದ್ದರು. ಕಂದಾಯ ವಸೂಲಿಯನ್ನು ಮಾಡುತ್ತಿದ್ದರು. ಮತ್ತು ಅದಕ್ಕೂ ಮೇಲಾಗಿ ಅವರಿಗೆ ಯಾವುದೇ ರೀತಿಯ ಅಪಾಯ ಆಗದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು. ಮತ್ತು ಗುಪ್ತಾಚಾರರಿಂದ ಪ್ರತಿಯೊಬ್ಬ ಪ್ರಜೆಯ ಬೇಡಿಕೆ ಏನೇನು ಇವೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು ಅವರು ಆಡಳಿತ ನಡೆಸುತ್ತಿದ್ದರು. ಅದು ಒಂದು ಕಾಲವಿತ್ತು. ಆಮೇಲೆ ಅದೇ ರೀತಿ ಬ್ರಿಟಿಷರ ಕಾಲ ಒಂದು ಬಂತು. ಬ್ರಿಟೀಷರ ಕಾಲದಲ್ಲಿ ಕೂಡ ಅವರು ಬಹಳ ಯಶಸ್ವಿಯಾಗಿ ತಮ್ಮ ಆಡಳಿತವನ್ನು ನಡೆಸಿದರು. ಶಾನುಭೋಗರ ಮೂಲಕ ಕಂದಾಯ ವಸೂಲು ಮಾಡುವುದಾಗಲೀ, ತಮ್ಮ ಆಡಳಿತದ ವ್ಯವಸ್ಥೆಯಲ್ಲಿ ಯಾರಿಗೂ ತೊಂದರೆ ಆಗದ ರೀತಿಯಲ್ಲಿ ಅವರೂ ಕೂಡ ತಮ್ಮದೇ ಆಗಿರತಕ್ಕ ಒಂದು ಪದ್ಧತಿಯಿಂದ ಆಡಳಿತ ಮಾಡಿದರು. ಇಂದು ಈ ಪ್ರಜಾಪ್ರಭುತ್ವದಲ್ಲಿ ಕೂಡ ಅನೇಕ ಇಲಾಖೆಯ ಮುಖ್ಯಸ್ಥರುಗಳನ್ನು ಇಟ್ಟುಕೊಂಡಿದ್ದೇವೆ. ಸರ್ಕಾರದ ವತಿಯಿಂದ ಬಹಳಷ್ಟು ಹಣವನ್ನು ಈ ಅಧಿಕಾರಿಗಳಿಗೆ ವಿನಿಯೋಗಿಸುತ್ತೇವೆ. ಇಷ್ಟೆಲ್ಲಾ ಇದ್ದರೂ ಕೂಡ ನಾವು ಹಿಂದಿನ ಆಡಳಿತವನ್ನು ತುಲನೆ ಮಾಡಿ ನೋಡಿದರೆ, ಬಹುಶಃ ಆ ಆಡಿಳಿತವನ್ನು ಕೊಡಲು ಆಗುವುದಿಲ್ಲವೇನೋ ಎನ್ನುವಂಥ ಮಾತನ್ನು ಪ್ರತಿ ಗ್ರಾಮಸ್ಥರು ಕೂಡ ಮಾತನಾಡುತ್ತಿದ್ದಾರೆ. ಒಂದು ಕಾಲದಲ್ಲಿ ಕಂದಾಯ ಇಲಾಖೆ ಬಹಳ ಪ್ರಾಮುಖ್ಯತೆ ಪಡೆದಿತ್ತು. ಅದರಲ್ಲಿರತಕ್ಕಂಥ ಕಲೆಕ್ಟರ್‌ಗಳಾಗಲೀ, ಡಿ.ಸಿ.ಯವರಾಗಲೀ, ತಹಶೀಲ್ದಾರ್‌ರವರಾಗಲೀ ಬಹಳ ಹೆಚ್ಚಿನ ರೀತಿಯಿಂದ, ಮನಸ್ಸಿಗೆ ಬರುವಂಥ ರೀತಿಯಲ್ಲಿ ಅವರು ಆಡಳಿತ ಕೊಡುತ್ತಿದ್ದರು. ಆದರೆ ದುರಾದೃಷ್ಟವೆಂದರೆ, ಇವತ್ತು ಇಷ್ಟೆಲ್ಲಾ ಸವಲತ್ತುಗಳಿದ್ದರೂ ಕೂಡ, ಅನೇಕ ಕಾನೂನುಗಳ ರಕ್ಷಣೆಯನ್ನು ಕೊಟ್ಟರೂ ಕೂಡ, ಸವಲತ್ತುಗಳನ್ನು ಕೊಟ್ಟರೂ ಕೂಡ ಆಡಳಿತದ ದೃಷ್ಟಿಯಿಂದ ಜನಸಾಮಾನ್ಯರಿಗೆ ಮುಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದನ್ನು ಇವತ್ತು ಯಾವ ರೀತಿಯಲ್ಲಿ, ಬಹುಶಃ ಸ್ವಾತಂತ್ರ್ಯ ಸಿಕ್ಕಿದ ನಂತರ ನಮಗೆ ಪ್ರಜಾಪ್ರಭುತ್ವ ಬಂದ ಮೇಲೆ ಸರ್ಕಾರ ಇಷ್ಟೆಲ್ಲಾ ಸಹಾಯ ಸವಲತ್ತುಗಳನ್ನು ಕೊಟ್ಟರೂ ಕೂಡ ನಾವು ಬಹಳ ವಿಫಲತೆಯನ್ನು ಕಂಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಪ್ರಿನ್ಸಿಪಾಲ್ ಸೆಕ್ರೆಟರಿ-2 ಎಂದು ಇದ್ದಾರೆ. ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್, ಕಮೀಷನರ್ ಆಫ್ ಸ್ಟ್ಯಾಂಪ್ಸ್, ಡೈರೆಕ್ಟರ್ ಆಫ್ ಸರ್ವೆ ಅಂಡ್ ಸೆಟಲ್‌ಮೆಂಟ್, ಕಮೀಷನರ್ ಆಫ್ ಎನ್‌ಡೋಮೆಂಟ್ ಅಂಡ್ ಚಾರಿಟಬಲ್, ಸೆಕ್ರೆಟರಿ ಫಾರ್ ಹಾಜ್ ಅಂಡ್ ವಕ್ಫ್ ಎಂದು ಇದ್ದಾರೆ.

ಇವರೆಲ್ಲಾ ರಾಜ್ಯ ಮಟ್ಟದ ಅಧಿಕಾರಿಗಳಾಗಿದ್ದರೆ, ನಾಲ್ಕು ಡಿವಿಷನಲ್ ಕಮೀಷನರ್‌ಗಳು ಇದ್ದಾರೆ. ಸುಮಾರು 20 ಜನ ಡೆಪ್ಯುಟಿ ಕಮೀಷನರ್‌ಗಳು, 52 ಜನ ಅಸಿಸ್ಟೆಂಟ್ ಕಮೀಷನರ್‌ಗಳು, 179 ಜನ ತಹಶೀಲ್ದಾರ್‌ಗಳು, ವಿಲೇಜ್ ಅಕೌಂಟೆಂಟ್‌ಗಳನ್ನು ಬಿಟ್ಟು ಇಷ್ಟೆಲ್ಲಾ ಆಡಳಿತ ಯಂತ್ರವನ್ನು ಮಾಡತಕ್ಕಂಥ ಹಿರಿಯ ಅಧಿಕಾರಿಗಳು ಇದ್ದರೂ ಕೂಡ ಇವತ್ತು ಜನಸಾಮಾನ್ಯರಿಗೆ ನ್ಯಾಯವನ್ನು ಒದಗಿಸುವುದಕ್ಕೆ ಕಂದಾಯ ಇಲಾಖೆಯಿಂದ ಸಾಧ್ಯವಾಗುತ್ತಿಲ್ಲ. ಅದಕ್ಕೆ ಅನೇಕ ಕಾರಣಗಳಿರಬಹುದು. ಕಂದಾಯ ಇಲಾಖೆಯನ್ನು ಪುನರುಜ್ಜೀವನಗೊಳಿಸತಕ್ಕಂಥ ಕೆಲಸ ನಿಮ್ಮಿಂದ ಆಗಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಬಹಳ ಮುಖ್ಯವಾಗಿ ಜನಸಾಮಾನ್ಯರಿಗೆ ಪ್ರತಿದಿನದ ಆಗುಹೋಗುಗಳು ಆಗಬೇಕಾಗಿದ್ದರೆ ಕಂದಾಯ ಇಲಾಖೆ ಬಹಳ ಮುಖ್ಯವಾಗಿರತಕ್ಕಂಥ ಇಲಾಖೆ. ಇದನ್ನು Mother of all departments ಎಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಒಂದು ರೆವಿನ್ಯೂ ಇಲಾಖೆ ಬಹಳ ವ್ಯವಸ್ಥಿತ ರೀತಿಯಿಂದ ನಡೆದದ್ದೇ ಆದರೆ ಇಡೀ ಸರ್ಕಾರಕ್ಕೆ ಒಂದು ಒಳ್ಳೆಯ ಆಡಳಿತ ಸಿಗುತ್ತದೆ ಎನ್ನುವುದನ್ನು ನಾವು ಮರೆಯಲು ಆಗುವುದಿಲ್ಲ. ಅವರು ತಲಾಟಿಯವರು ಇರಬಹುದು, ಅಸಿಸ್ಟೆಂಟ್ ಕಮೀಷನರ್ ಇರಬಹುದು, ಸರ್ಕಲ್‌ನವರು ಇರಬಹುದು, ತಹಸೀಲ್ದಾರ್ ಇರಬಹುದು, ಅವರವರ ಕಾರ್ಯಕ್ಷೇತ್ರವನ್ನು ಅವರು ಬಹಳ ಒಳ್ಳೆಯ ರೀತಿಯಿಂದ ನಡೆಸಿಕೊಂಡು ಹೋದದ್ದೇ ಆದರೆ ಜನಸಾಮಾನ್ಯರಿಗೆ ಯಾವುದೇ ರೀತಿಯಿಂದ ತೊಂದರೆಯಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ತಲಾಟಿಯವರು ಇರುತ್ತಾರೆ. ನಿನ್ನೆ ಅವರು ಬಹಳ ವ್ಯಾಖ್ಯಾನ ಮಾಡಿದರು. ಈ ಗ್ರಾಮ ಲೆಕ್ಕಿಗರು ಎಂದರೆ ನಿಜವಾಗಿ ಅವರು ಬ್ರಹ್ಮ ಸ್ವರೂಪಿಗಳು ಎಂದು ಹೇಳಿದರೆ ತಪ್ಪಾಗಲಾರದು. ಕೆಟ್ಟದ್ದನ್ನು ಸೃಷ್ಟಿ ಮಾಡತಕ್ಕಂಥ ಶಕ್ತಿಯೂ ಅವರಲ್ಲಿ ಇದೆ. ಒಳ್ಳೆಯದನ್ನು ಸೃಷ್ಟಿ ಮಾಡತಕ್ಕಂಥ ಸಾಮರ್ಥ್ಯ ಕೂಡ ಅವರಲ್ಲಿ ಇದೆ. ತಲಾಟಿಯವರು ಮತ್ತು ಕಂದಾಯ ಇಲಾಖೆ ನಮ್ಮ ಜನಸಾಮಾನ್ಯರಿಗೆ ಮತ್ತು ನಮಗೆ ಹುಟ್ಟಿನಿಂದ ಸಾಯುವವರೆಗೆ ಅವರ ಅನ್ಯೋನ್ಯತೆ ಇದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಹುಟ್ಟಿದ ದಾಖಲೆಯಿಂದ ಹಿಡಿದು ಮರಣದ ದಾಖಲೆಯನ್ನು ಮಾಡತಕ್ಕಂಥವನು ಎಂದರೆ ಈ ತಲಾಟಿ. ಮೇಲಾಗಿ ಇವತ್ತು ಯಾವುದಾದರೂ ಒಂದು ಜಮೀನಿನ ವ್ಯಾಜ್ಯ ನಿರ್ಮಾಣ ಆಗಬೇಕಾಗಿತ್ತು ಎಂದರೆ ಅವನೇ ಕಾರಣ, ಅದು ಪರಿಹಾರ ಆಗಬೇಕು ಎಂದರೂ ಕೂಡ ಅವನೇ ಕಾರಣ. ಆ ದೃಷ್ಟಿಯಿಂದ ಕೆಳಮಟ್ಟದಲ್ಲಿ ಇರತಕ್ಕಂಥ ಅಧಿಕಾರಿ ಏನಿದ್ದಾನೆ, ಅದು ಬಹಳ ಪ್ರಾಮುಖ್ಯವಾಗಿರತಕ್ಕಂಥ ಒಂದು ಅಂಗ. ಇವತ್ತು ನಾವು ಬಹಳ ವೇದನೆಯಿಂದ ಹೇಳಬೇಕಾಗಿದೆ, ಇವತ್ತು ನಾವು ಹೈಕೋರ್ಟುಗಳನ್ನು ಬಹಳ ಹೆಚ್ಚಿನ ರೀತಿಯಿಂದ ಸ್ಥಾಪನೆ ಆಗಬೇಕು ಎಂದು ಕೇಳುತ್ತೇವೆ. ಇನ್ನು ಹೆಚ್ಚು ಮುನ್‌ಸೀಫ್ ಕೋರ್ಟ್‌ಗಳು ಆಗಬೇಕು ಎಂದು ಕೇಳುತ್ತೇವೆ, ಸಿವಿಲ್ ಕೋರ್ಟ್‌ಗಳು ಆಗಬೇಕು ಎಂದು ಕೇಳುತ್ತೇವೆ. ವ್ಯಾಜ್ಯಗಳ ಬಗ್ಗೆ ವಕೀಲರ ಬಗ್ಗೆ, ನ್ಯಾಯಾಂಗದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅದಷ್ಟು ಹೆಚ್ಚು ಕೇಸಸ್‌ಗಳು ಡಿಸ್‌ಪೋಸ್ ಆಫ್ ಆಗಬೇಕೆಂದು ನಾವು ಚರ್ಚೆ ಮಾಡುತ್ತಿರುತ್ತೇವೆ. ಅದು ತಮ್ಮೆಲ್ಲರಿಗೂ ಗೊತ್ತಿದೆ. ಆದರೆ ಇವತ್ತು ನ್ಯಾಯಾ ತಡವಾಗುವುದಕ್ಕೆ ಮೂಲ ಕಾರಣ ಯಾವುದು ಎಂದು ನಾವು ಯಾರೂ ಕೂಡ ಹಿಂದಿನ ದಿನಗಳನ್ನು ಪರಾಮರ್ಶಿಸುವುದಕ್ಕೆ ಹೋಗುವುದಿಲ್ಲ. ಖಾನಿಯಾಗುವಂಥದ್ದು ಜಗಳ ಆಗುವಂಥದ್ದನ್ನು ನೋಡುತ್ತೇವೆ. ಇವೊತ್ತು ಯಾವುದಾದರೂ ಜಗಳ ಆಗುವುದಕ್ಕೆ ಕಾರಣ

ಎಂದರೆ ಭೂ ವಿವಾದ. ಇವೊತ್ತು ಕ್ರಿಮಿನಲ್ ಕೇಸೆಸ್ ಅಥವಾ ಸಿವಿಲ್ ಡಿಸ್‌ಪ್ಯೂಟ್ಸ್‌ನ್ನು ನಾವು ಗಮನಿಸಿದರೆ ಅಥವಾ ಭೂ ವಿವಾದ ಉತ್ಪತ್ತಿ ಏಕೆ ಆಯಿತು ಎಂಬುದನ್ನು ನಾವು ಗಮನಿಸಿದರೆ ಅದಕ್ಕೆ ಮೂಲ ಕಾರಣ ಅಲ್ಲಿರತಕ್ಕಂಥ ಸೃಷ್ಟಿಕರ್ತ ತಲಾಟಿ ಕೊಟ್ಟಿರತಕ್ಕಂಥ ಉತಾರಗಳು. ಏಕೆಂದರೆ ಅಲ್ಲಿ ನೂರಾರು ವರ್ಷಗಳ ಭೂ ದಾಖಲೆಗಳು ಇಲ್ಲ. ಆದಕಾರಣ ಜಗಳ ಅಥವಾ ಖೂನಿಗೆ ಕಾರಣ ಆ ತಲಾಟಿ ಯಾರದೋ ಜಮೀನನ್ನು ಯಾರಿಗೋ ಮಾರುವುದು. ಇವೊತ್ತು ನನ್ನ ಜಮೀನನ್ನು ಇನ್ನೊಬ್ಬರಿಗೆ ಮಾರುವಂತ ಸತ್ಯ ಕೂಡ ಅವರಿಗೆ ಇದೆ. ಆದ್ದರಿಂದ ಇವೊತ್ತು ವ್ಯಾಜ್ಯಗಳು ಎಲ್ಲಿ ಆಗುತ್ತವೆ ಎಂದರೆ ಈ ಮಟ್ಟದಲ್ಲಿರುವ ಗ್ರಾಮ ಲೆಕ್ಕಿಗರಲ್ಲಿ. ಇವೊತ್ತಿನ ದಿವಸ ನಾವು ಗ್ರಾಮ ಲೆಕ್ಕಿಗರನ್ನು ಭೂ ವ್ಯಾಜ್ಯಗಳ ಸೃಷ್ಟಿಕರ್ತ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಆ ದೃಷ್ಟಿಯಿಂದ ಅವರನ್ನು ಕಂಡುಹಿಡಿದು ಅವರಲ್ಲಿರತಕ್ಕಂಥ ನ್ಯೂನತೆಯಗಳನ್ನು, ತಪ್ಪುಗಳನ್ನು ಸರಿದೂಗಿಸತಕ್ಕಂಥ ಸಾಮರ್ಥ್ಯ ಶಕ್ತಿ ಇವೊತ್ತಿನ ದಿವಸ ನೀವು ಮನಸ್ಸು ಮಾಡಬೇಕು. ಆ ದೃಷ್ಟಿಯಿಂದ ಗ್ರಾಮ ಲೆಕ್ಕಿಗರ ಮೂಲಕ ಏನು ಭೂ ವಿವಾದ ಅಥವಾ ವ್ಯಾಜ್ಯಗಳು ಆಗುತ್ತಿವೆ ಅವುಗಳನ್ನು ತಪ್ಪಿಸಲು ಮುಂಜಾಗ್ರತೆಯಾಗಿ ಅವರಲ್ಲಿರತಕ್ಕಂಥ ಭೂ ವಿವಾದಕ್ಕೆ ಸಂಬಂಧಪಟ್ಟಿರತಕ್ಕಂಥ, ಭೂಮಿಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ರೆಕಾರ್ಡ್ಸ್‌ಗಳನ್ನು ಕಂಪ್ಯೂಟರೈಸ್ಡ್ ಇದಕ್ಕೆ ಹೆಚ್ಚು ದುಡ್ಡು ಖರ್ಚು ಆಗುವುದಿಲ್ಲ. ಇಲ್ಲದಿದ್ದರೆ ಇವೊತ್ತಿನ ದಿವಸ ಅನೇಕ ವೈಜ್ಞಾನಿಕ ವಿಧಾನಗಳು ಇವೆ, ಆ ವೈಜ್ಞಾನಿಕ ವಿಧಾನಗಳ ಮೂಲಕ ರೆಕಾರ್ಡ್‌ಗಳನ್ನು ಆದ್ಯತೆಯ ಮೇಲೆ ರಕ್ಷಣೆ ಮಾಡಿದರೆ ನೀವು ಅನಕ್ಷರಸ್ಥರಿಗೆ, ಜನರಿಗೆ ಸಹಾಯ ಮಾಡಿದಂತಾಗಿ ಕಂದಾಯ ಇಲಾಖೆಯಲ್ಲಿ ಆಗುತ್ತಿರುವ ಖೂನಿಯಾಗಲೀ, ವ್ಯಾಜ್ಯವಾಗಲೀ ಬಗೆಹರಿಸಬಹುದು. ಈ ದಿಸೆಯಲ್ಲಿ ಇಲಾಖಾ ಸಚಿವರಾದ ತಾವು ಮಾಡುತ್ತೀರೆಂದು ಭರವಸೆ ಇಟ್ಟಿದ್ದೇನೆ. ಅದರ ಜೊತೆಗೆ 8456 ಗ್ರಾಮ ಲೆಕ್ಕಿಗರ ಸರ್ಕಲ್ಸ್ ಇವೆ ಅದರಲ್ಲಿ 707 ಸರ್ಕಲ್‌ಗಳಲ್ಲಿ ಗ್ರಾಮ ಲೆಕ್ಕಿಗರು ಇಲ್ಲ, ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯಲ್ಲಂತು ಇಲ್ಲವೇ ಇಲ್ಲ. ಸುಮಾರು ಹತ್ತು ವರ್ಷದಿಂದ ಆ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೀವು ತುಂಬಲೇ ಇಲ್ಲ. ಇದರಿಂದ ನೀವು ಯಾವ ರೀತಿ ನ್ಯಾಯ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ? ಮೊದಲನೆಯದಾಗಿ ಅವರಿಗೆ ವಾಸಿಸಲು ಕ್ವಾರ್ಟರ್ಸ್ ಇಲ್ಲ. ಅವರು ಊರೊಳಗೆ ಇರುವುದಿಲ್ಲ. ಇದ್ದ ರೆಕಾರ್ಡ್ಸ್‌ಗಳನ್ನು ಒಂದು ಟ್ರಂಕ್‌ನೊಳಗೆ ಇಟ್ಟುಕೊಂಡು ಅಲ್ಲಿರುವ ವಾಲೀಕಾರರರು ಹೇಳುವ ಪ್ರಕಾರ ಎಂಟ್ರಿ ಮಾಡುತ್ತಾರೆ ಅಲ್ಲಿರತಕ್ಕಂಥ ಯಾರದೋ ಮಾತು ಕೇಳಿ ಏನೋ ಮಾಡುತ್ತಾನೆ. ಆದ್ದರಿಂದ ನೀವು ಕೆಳಮಟ್ಟದ ಬೇಸನ್ನು ಮೊದಲು ಸುಧಾರಣೆ ಮಾಡಬೇಕು. ನೀವು ಮೇಲಟ್ಟದ ಕಾರ್ಯದರ್ಶಿಯವರನ್ನಾಗಲೀ, ಡಿ.ಸಿ. ಯವರನ್ನಾಗಲೀ ಸುಧಾರಣೆ ಮಾಡುವುದು ಬೇಡ. ನೀವು ಕೆಳ ಮಟ್ಟದ ಅಧಿಕಾರಿಗಳ ನ್ಯೂನತೆಗಳನ್ನು ಸರಿದೂಗಿಸಿ ಏಕೆಂದರೆ ಅವು ಜನಸಾಮಾನ್ಯರಿಗೆ ಮುಟ್ಟುವಂಥ ನ್ಯೂನತೆಗಳು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಗ್ರಾಮ ಲೆಕ್ಕಿಗರಿಗೆ ಕ್ವಾರ್ಟರ್ಸ್ ಇರುವುದಿಲ್ಲ ಎಂದು ನೆನ್ನೆ ಕಾಗೋಡು ತಿಮ್ಮಪ್ಪನವರು ಹಾಗೂ ಇಂದು ಶ್ರೀ ಚಿಮನಕಟ್ಟಿಯವರು ಹೇಳಿದ್ದಾರೆ ಅದಕ್ಕೆ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದನ್ನೆಲ್ಲಾ ತಿಳಿದುಕೊಂಡು ಒಂದು ವಾರದ ಹಿಂದೆಯೇ ಗ್ರಾಮೀಣಾಭಿವೃದ್ಧಿಯ ಇಲಾಖೆಯ ಕಾರ್ಯದರ್ಶಿಗಳು, ನಾನು ಹಾಗೂ ನಮ್ಮ ಕಾರ್ಯದರ್ಶಿಗಳು

ಕೂತುಕೊಂಡು ಒಂದು ತೀರ್ಮಾನವನ್ನು ಮಾಡಿದ್ದೇವೆ. ಅದು ಏನೆಂದರೆ ಆ ಗ್ರಾಮಲೆಕ್ಕಾಧಿಕಾರಿ ಕಡ್ಡಾಯವಾಗಿ ಮೂರು ದಿವಸಗಳ ಕಾಲ ಆ ಹಳ್ಳಿಯಲ್ಲಿ ಇರಲೇಬೇಕೆಂದು. ಹಾಗೆಯೇ ಪಂಚಾಯತ್ ಕಛೇರಿಯಲ್ಲೂ ಕೂಡ ಕಡ್ಡಾಯವಾಗಿ ಅವರಿಗೆ ಒಂದು ರೂಮನ್ನು ಕೊಡಲೇಬೇಕು ಹಾಗೂ ಇನ್ನು ಮುಂದೆ ಯಾವುದಾದರೂ ಪಂಚಾಯತ್‌ನವರು ಕಟ್ಟಡ ಕಟ್ಟಿಸುತ್ತಿದ್ದರೆ ಅದರಲ್ಲಿ ಗ್ರಾಮ ಲೆಕ್ಕಿಗರಿಗೆ ಒಂದು ರೂಮನ್ನು ಪ್ಲಾನ್ ಮತ್ತು ಎಸ್ಟಿಮೇಟ್‌ನಲ್ಲಿ ಸೇರಿಸಲೇ ಬೇಕೆಂದು ಕೂಡ ನಿರ್ಣಯ ಮಾಡಿದ್ದೇವೆ ಹಾಗೂ ಈಗಾಗಲೇ ಸರ್ಕ್ಯುಲರನ್ನು ಕೊಟ್ಟು ಕಳುಹಿಸಿದ್ದೇವೆ.

ಶ್ರೀ ಬಿ.ಬಿ. ಚಿಮನಕಟ್ಟಿ : ಬಹುಶಃ ಗ್ರಾಮಪಂಚಾಯ್ತಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಅವರಿಗೆ ನೀವು ಮನೆಯನ್ನು ಮಾಡಿದ್ದರೆ ಬಹಳ ಚೆನ್ನಾಗಿ ಆಗುತ್ತದೆ. ಆದಕಾರಣ ಆದಷ್ಟು ಶೀಘ್ರ ತಾವು ಅವರಿಗೆ ಹೆಡ್‌ಕ್ವಾರ್ಟರ್ಸ್‌ನಲ್ಲಿ ಕ್ವಾರ್ಟರ್ಸ್ ಇರುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಕೋರುತ್ತೇನೆ.

ಇನ್ನು ಹಿಂದೆ ಜಮಾಬಂಧಿ ಎಂದು ಮಾಡುತ್ತಿದ್ದರು. ಆದರೆ ಇವೊತ್ತು ಬಹುಶಃ ಯಾರೂ ಜಮಾಬಂಧಿ ಮಾಡುವುದಿಲ್ಲ. ಅದನ್ನು ಇನ್ಸಿಸ್ಟ್ ಮಾಡಬೇಕು. ಹಿಂದೆ ಆಡಳಿತವನ್ನು ಬಹಳ ಶಿಸ್ತಿನಿಂದ ಮಾಡುತ್ತಿದ್ದರು. ನಿಜವಾಗಲೂ ನಾವು ಬ್ರಿಟಿಷರ ಕಾಲದ ಒಳ್ಳೆಯ ವಿಚಾರಗಳನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆವಾಗ ಬ್ರಿಟಿಷರು ಬಾಂದಗಲ್ ಎಂದು ಹಾಕಿರುತ್ತಿದ್ದರು. ಆ ಬಾಂದಗಲ್ ಇರಲಿಲ್ಲ ಎಂದರೆ ನಿಮ್ಮ ಸರ್ವೆಯರ್‌ಗೆ ಯಾವ ಹೊಲ ಎಲ್ಲಿ ಇದೆ ಎಂದು ಏನೂ ಗುರುತು ಆಗುತ್ತಿರಲಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಈಗ ಆ ಬಾಂದಗಲ್ ಇಲ್ಲವೇ ಇಲ್ಲ. ಮೊನ್ನೆ ಬೆಂಗಳೂರು ಪಕ್ಕದಲ್ಲಿ ಒಂದು ವ್ಯಾಜ್ಯ ಬಂತು. ಆಗ ಅವರು ಮುಖ್ಯಮಂತ್ರಿಗಳ ಮನೆ ಹತ್ತಿರ ಎಲ್ಲಾ ಬಡವರು ಬಂದು ನಮಗೆ ಸೈಟ್ ಇಲ್ಲ, ಸರ್ವೆ ಮಾಡಿಸಿಕೊಡಿ ಎಂದು ಹೇಳಿದಾಗ, ನಮಗೆ ಮುಖ್ಯಮಂತ್ರಿಗಳು ಹೇಳಿದಾಗ ನಾವು ನಮ್ಮ ಸರ್ವೆಯರ್‌ಗಳನ್ನು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ ಸರ್ವೆ ಮಾಡಿಸಿ ಎಂದರೆ ನಮ್ಮ ಸರ್ವೆಯರ್ ಮೂರು ಹಳ್ಳಿಗಳನ್ನು ಸರ್ವೆ ಮಾಡಬೇಕಾಯಿತು. ಆ ಭಾಗದಲ್ಲಿ ಬಾಂದ್‌ಗಲ್ ಇಲ್ಲವೇ ಇಲ್ಲ. ಎಲ್ಲಾ ಕಿತ್ತುಹಾಕಿ ಬಿಟ್ಟಿದ್ದಾರೆ.

ಶ್ರೀ ಬಿ.ಬಿ. ಚಿಮನಕಟ್ಟಿ : ಆ ದೃಷ್ಟಿಯಿಂದ ಜಿಲ್ಲಾಧಿಕಾರಿಗಳಾಗಲಿ, ನಮ್ಮ ವಿಭಾಗ ಮಟ್ಟದಲ್ಲಿದ್ದ ವಿಭಾಗಾಧಿಕಾರಿಗಳಾಗಲೀ, ಸಹಾಯಕ ಕಮೀಷನರ್‌ಗಳಾಗಲೀ, ಪ್ರತಿ ಗ್ರಾಮಗಳಿಗೆ ಹೋಗಿ ಕ್ಯಾಂಪ್ ಹಾಕಿ, ಈ ಕಾರ್ಯವನ್ನು ಅವರೂ ಕೂಡ ನೋಡಬೇಕಾಗುತ್ತದೆ. ನಿಮ್ಮ ಸರ್ಕಾರಿ ಆದೇಶದಲ್ಲೂ ಕೂಡ ಪ್ರತಿ ಜಿಲ್ಲಾಧಿಕಾರಿಗಳು ಹತ್ತು ಗ್ರಾಮಗಳಲ್ಲಿ ವಾಸ್ತವ್ಯ ಮಾಡಬೇಕೆಂದು ಇದೆ. ಬಹಳ ರಿಮೋಟ್ ವಿಲೇಜ್‌ನಲ್ಲೂ ಕೂಡ ಅವರು ಇರಬೇಕೆಂದು ಇದೆ. ಗ್ರಾಮ ಮಟ್ಟದಲ್ಲಿ ಕ್ಯಾಂಪ್ ಮಾಡಿ ಗ್ರಾಮೀಣ ಮಟ್ಟದಲ್ಲಿರತಕ್ಕಂಥ ಸಮಸ್ಯೆಗಳನ್ನು ಕೂಲಂಕಷವಾಗಿ ಎಷ್ಟು ಜನ ಡಿ.ಸಿ.ಗಳಾಗಲೀ ಎಸಿಗಳಾಗಲೀ ವಿಚಾರ ಮಾಡಿದ್ದಾರೆಂದು ಒಂದು ಉದಾಹರಣೆಯನ್ನು ಕೊಡಿ. ಯಾರೂ ಮಾಡುವುದಿಲ್ಲ. ವಿಭಾಗ ಮಟ್ಟದ ಅಧಿಕಾರಿಗಳು ಕೂಡ ಗ್ರಾಮ ಮಟ್ಟಕ್ಕೆ ಹೋಗುವುದಿಲ್ಲ. ಇಲ್ಲಿರತಕ್ಕಂಥ ಎಲ್ಲಾ ಕಾರ್ಯದರ್ಶಿಗಳಿಗೆ ಹೇಳಿ ಅವರಿಗೆ ಟಾರ್ಗೆಟ್ ಕೊಡಿ. ಅವರು ಪ್ರತಿಯೊಂದು ಜಿಲ್ಲೆಗೆ ಹೋಗಲಿ. ಬರೀ ಬೆಂಗಳೂರಿನಲ್ಲಿ

ಕೂತು ಆಡಳಿತ ಮಾಡುವುದು ದೇಶಕ್ಕೆ ಒಳ್ಳೆಯದಲ್ಲ. ಗ್ರಾಮ ಮಟ್ಟದಲ್ಲಿರತಕ್ಕಂಥ ನ್ಯೂನತೆಗಳು, ತೊಂದರೆಗಳು, ಕಷ್ಟಗಳು ಜನಸಾಮಾನ್ಯರು ಏನು ಎದುರಿಸುತ್ತಾರೆ ಅವುಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಮತ್ತು ನೀವು ಆಡಳಿತ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಆ ದಿಸೆಯಲ್ಲಿ ನೀವು ಇನ್‌ಸ್ಟ್ರಕ್ಷನ್ಸ್ ಕೊಡಬೇಕು. ಯಾವುದೇ ಐ.ಬಿ. ಯಲ್ಲಿ ಕುಳಿತುಕೊಂಡು ಊಟ ಮಾಡಿ ಇಂತಹ ಹಳ್ಳಿಯಲ್ಲಿ ವಾಸ್ತವ್ಯ ಮಾಡಿದ್ದೇನೆ ಎಂದು ರೆಕಾರ್ಡ್ ತೋರಿಸತಕ್ಕಂಥ ಜಿಲ್ಲಾಧಿಕಾರಿಗಳನ್ನು ನೀವು ಬೇರೆ ಕಡೆ ಕಳುಹಿಸಿ. ಗ್ರಾಮೀಣ ಮಟ್ಟದಲ್ಲಿ ಅಂತಹವರನ್ನು ನಾವು ಇಟ್ಟುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಇವೊತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಕೆಳಮಟ್ಟದಲ್ಲಿ ಇರತಕ್ಕಂಥ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡಿದಾಗ ಮಾತ್ರ ನಿಮಗೆ ಒಳ್ಳೆಯ ಕೀರ್ತಿ ಬರುತ್ತದೆ. ಆ ದಿಸೆಯೊಳಗೆ ಜಿಲ್ಲಾಧಿಕಾರಿಗಳು, ಸಹಾಯಕ ಕಮೀಷನರ್‌ಗಳು, ತಹಸೀಲ್ದಾರರು ಜನಸಂಪರ್ಕ ಸಭೆಗಳ ಮೂಲಕ ಅದನ್ನು ಮಾಡಿದರೆ ಒಳ್ಳೆಯದಾಗುತ್ತದೆಂದು ನನ್ನ ಸಲಹೆ. ಒಂದು ವರ್ಷದಲ್ಲಿ ಕನಿಷ್ಠ 50 ಹಳ್ಳಿಗಳಲ್ಲಾದರೂ ಅವರು ಗ್ರಾಮಸಭೆಗಳನ್ನು ಮಾಡಬೇಕೆಂದು ತಹಸೀಲ್ದಾರರವರಿಗೆ ನೀವು ಒಂದು ಟಾರ್ಗೆಟ್ ಕೊಡಿ. ಅವರು ಗ್ರಾಮಮಟ್ಟದಲ್ಲಿ ಗ್ರಾಮ ಸಭೆಗಳಿಗೆ ಹೋಗಲಿ, ಡಂಗುರವನ್ನು ಬಾರಿಸಲಿ, ಅಲ್ಲಿರತಕ್ಕಂಥ ಗ್ರಾಮಲೆಕ್ಕಿಗರನ್ನು ಕರೆದುಕೊಂಡು ಹೋಗಿ ಕಂದಾಯ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಅರ್ಜಿಗಳನ್ನು ತೆಗೆದುಕೊಳ್ಳಲಿ. ಸ್ಥಳದಲ್ಲೇ ಉತಾರ ಕೊಡುವುದು ಇರಬಹುದು, ವಾಸ ಮಾಡುವುದು ಇರಬಹುದು, ಪಾಲ್ವಾಟೀನ್ ಮಾಡುವುದು ಇರಬಹುದು ಮತ್ತು ಕಂದಾಯ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಸಮಸ್ಯೆಗಳನ್ನು ಮನಸ್ಸು ಮಾಡಿದರೆ ಒಂದೇ ದಿವಸದಲ್ಲಿ ಒಂದೇ ತಾಸಿನಲ್ಲಿ ಇತ್ಯರ್ಥ ಮಾಡಬಹುದು. ಆದರೆ ನಮ್ಮ ದುರಾದೃಷ್ಟ ಯಾವ ಅಧಿಕಾರಿಗಳು ಮನಸ್ಸು ಮಾಡುತ್ತಿಲ್ಲ. ಏಕೆಂದರೆ ಅನೇಕ ರೀತಿಯಿಂದ ಅವರಿಗೆ ಲಾಭವಾಗಿದೆ. ಈ ಲಾಭವೆಲ್ಲಾ ತಪ್ಪಿ ಹೋಗಿಬಿಡುತ್ತದೆ. ಜನ ಸಂಪರ್ಕ ಸಭೆ ಮಾಡಿ ಅವರಿಗೆ ಇನ್‌ಸಿಸ್ಟ್ ಮಾಡಿದರೆ ಒಳ್ಳೆಯದು. ಹೀಗೆ ಮಾಡಿದರೆ ಅದರಿಂದ ಲಾಭ ತಪ್ಪಿ ಹೋಗುತ್ತದೆ ಎಂಬ ದೃಷ್ಟಿಯಿಂದ ಹೀಗೆ ಮಾಡುತ್ತಾರೆ. ತಾವು ಆ ದೃಷ್ಟಿಯಿಂದ ಈಗ ಒಂದು ಸರ್ಕ್ಯುಲರ್ ಇಷ್ಯೂ ಮಾಡಿ ಪ್ರತಿ ತಿಂಗಳು ಇಷ್ಟು ಎಂದು ನಿಗದಿ ಮಾಡಿ, ಅದು ಒಂದು ತಿಂಗಳು, ವರ್ಷದಲ್ಲಿ ಪ್ರತಿಯೊಬ್ಬ ತಹಶೀಲ್ದಾರ್ ಜನ ಸಂಪರ್ಕ ಮಾಡಿ ಕಂದಾಯ ಇಲಾಖೆಯಲ್ಲಿ ಇರತಕ್ಕಂತಹ ಎಲ್ಲಾ ಕೆಲಸಗಳನ್ನು ಮಾಡಬಹುದು. ಇದನ್ನು ತಾವು ಮಾಡಿದರೆ ನಿಮಗೂ ಕೂಡ ಒಳ್ಳೆಯ ಹೆಸರು ಬರುತ್ತದೆ ಎಂಬ ಆಶಾಭಾವನೆಯನ್ನು ಇಟ್ಟುಕೊಂಡಿದ್ದೇನೆ. ಮತ್ತು ಇದರ ಜೊತೆಗೆ ಪಟ್ಟಾ ಬುಕ್ಕ ಕೊಟ್ಟಿಲ್ಲ.

ಶ್ರೀ ಜೆ.ಎಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ತಾವು ಹೇಳುವ ಜಮಾ ಬಂದೀ ಅದು ಆಗಿನ ಕಾಲದ ವ್ಯವಸ್ಥೆಯಲ್ಲಿ ಕೋರ್ಟ್ ಆಗಿತ್ತು. ಜಮಾ ಬಂದೀ ಎಂದರೆ ಅದು ಹುಜೂರ್ ಜಮಾಬಂಧೀ ಆದರೆ ಒಂದು. ತಹಸೀಲ್ದಾರ್ ಜಮಾಬಂಧೀಯಾದರೆ ಕೆಲವು. ಕಂದಾಯ ಬಾಕಿ ಅಲ್ಲೇ ಹರಾಜು ಹಾಕಿ ಖಾತೆಯನ್ನು ಅಲ್ಲಿಯೇ ಬದಲಾವಣೆ ಮಾಡಿ ಬಿಡುತ್ತಿದ್ದರು. ಎಷ್ಟು ಬಾಕಿ ಬರಬೇಕು ಅದನ್ನು ಕಟ್ಟಲೇ ಬೇಕಿತ್ತು. ಜಮಾಬಂಧೀ ಅರ್ಥ ಏನೆಂದರೆ ಬಾಕಿ ಏನು ಬರಬೇಕು ಅದನ್ನು ಕಟ್ಟೆ ಬಿಡಬೇಕಾಗಿತ್ತು. ಆಗ ಎಂಎಲ್‌ಎ ಗಳು ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ವೀರಪ್ಪನ್ ಬಗ್ಗೆ ಹೇಳಿಕೆ ಕೊಟ್ಟರಂತೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ರಾಜ್ಯದಲ್ಲಿ 180 ಜನರ ಮರಣ ಹೋಮ ನಡೆದಿದೆ. 180 ಜನ ಮಹಿಳೆಯರು ವಿಧವೆಯರಾಗಿದ್ದಾರೆ ಒಳ್ಳೆ ಒಳ್ಳೆಯವರೇ ಆದು ನಮ್ಮ ಹಣೆ ಬರಹ. ನನಗೇನೂ ಅವರ ಬಗ್ಗೆ ವೈಯಕ್ತಿಕವಾಗಿ ದ್ವೇಷ ಇಲ್ಲ. ಒಳ್ಳೆಯ ಅಭಿಪ್ರಾಯವೇ ಇದೆ. ಆದರೆ ಸರ್ಕಾರ ತಗೆದುಕೊಂಡ ನಿರ್ಧಾರ ಅಪಾಯಕಾರಿ ಬೆಳವಣಿಗೆ. ಸರಿಯಾಗಿಯೇ ಇದೆ ಎಂದು ಹೇಳುವವರು ಇಂಥವರು. ಎಂಥವರು ಎಂದರೆ ಒಂದೊಂದು ಚುಟಕಾ-ಚುಟಕಾ ಆಸೆ ಪಡುತ್ತಾರಲ್ಲಾ ಇಂಥವರು. ನನ್ನಂಥವರಲ್ಲ. ಆದು ನನಗೆ ಗೊತ್ತಿದೆ "ಹೆತ್ತವಳಿಗೆ ಗೊತ್ತು ಹೆರಿಗೆಯ ನೋವು" ಈ ಬಂಜೆಗೆ ಏನು ಗೊತ್ತು? ಇದು ಬಂಜೆ ಇದಕ್ಕೆ ಏನು ಗೊತ್ತು ನೋವು, ನನ್ನ ಜಿಲ್ಲೆ, ನನ್ನ ತಾಲ್ಲೂಕಿನಲ್ಲಿ ನಡೆದಿರತಕ್ಕಂತಹ ಹೋರಾಟ, ರಕ್ತಪಾತ, ಆನೆಗಳ ದಂತಗಳ ಚೋರತನ. ಆ ಅನ್ಯಾಯ ಯಾರೂ ಸಹಿಸಲು ಸಾಧ್ಯವಿಲ್ಲ.

ನರಹಂತಕ ವೀರಪ್ಪನ್ ಬಗ್ಗೆ ಶ್ರೀ ವಾಟಾಳ್ ನಾಗರಾಜ್‌ರವರಿಂದ ಪ್ರಸ್ತಾಪ ಹಾಗು ಧರಣಿ

ಈ ನೋವು ಸತ್ತವರಿಗೆ ಗೊತ್ತು. ಸಾಯದೆ ಇರುವವರೆಗೆ ಏನು ಗೊತ್ತು ನೋವು? ನಾನು ಅವರನ್ನು ವೈಯಕ್ತಿಕವಾಗಿ ದೋಷಣೆ ಮಾಡುತ್ತಾ ಇಲ್ಲ. ಸರ್ಕಾರದ ನಿರ್ಧಾರ ಅಪಾಯಕಾರಿ ಬೆಳವಣಿಗೆ, ಈ ಅಪಾಯಕಾರಿ ಬೆಳವಣಿಗೆಯನ್ನು ನಾನು ವಿರೋಧಿಸುತ್ತೇನೆ, ವಿರೋಧಿಸಿ ಧರಣಿ ಮಾಡುತ್ತೇನೆ. ನನಗೆ ಗೊತ್ತಿದೆ ಜಿಗಜಣಗಿಯವರೇ, ಏನು ನಗುತ್ತಾ ಇದ್ದಿರಿ ನಾಚಿಕೆಯಾಗಬೇಕು 20 ವರ್ಷದ ರಾಜಕೀಯದಲ್ಲಿ ನಿರಂತರವಾಗಿ ಮುಂದುವರೆದಿರತಕ್ಕ ಅನ್ಯಾಯ ನೋಡಿ. ನೀವು ಎಲ್ಲರೂ ರಾಜೀನಾಮೆಯನ್ನು ಕೊಡಬೇಕು.

(ಗೊಂದಲ)

(xxx) ನನ್ನ ಮೆಂಬರ್‌ಶಿಫ್ ಕಿತ್ತು ಹಾಕಿದರೆ ಹಾಕಿ. ಇದರಲ್ಲಿ ನನಗೆ ಎಷ್ಟು ನೋವು ಆಗಿದೆ ನನಗೆ ಗೊತ್ತು.

(ಶ್ರೀ ವಾಟಾಳ್ ನಾಗರಾಜ್ ಅವರು ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ
ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಎಸ್. ಕೃಷ್ಣಪ್ಪ : ಈ ರೀತಿ ಏನು ಮಾಡುತ್ತೀರಿ ಮಾಡಿ ಎಂದು ಹೇಳಿ ಹೋಗುವುದು ಸರಿಯೇ ಇದು ಸಭೆನಾ. ದಬ್ಬಾಳಿಕೆ ಹಾಗೆ ಮಾತನಾಡಿದರೆ ಹೇಗೆ?

(ಗೊಂದಲ)